- ಮಾರ್ಚ್ ತಿಂಗಳ ಮಹಿಳಾ ವಿಶೇಷ ಸಂಚಿಕೆಯಲ್ಲಿನ ಸಂದರ್ಶನ, ಕತೆಗಳು ಮೆಚ್ಚುಗೆಯಾದವು. 'ಜೊತೆ ಬೇಡುವೆ ನವಿಲೇ' (ಸುನಂದಾ ಕಡಮೆ), 'ಮರಳಿ ಬಾ ಮನ್ವಂತರವೇ' (ಶಶಿಕಲಾ ಬಾಯಾರು), 'ಕನಸಿನೊಳಗಣ ಮನಸು' (ಮಧುರಾ ಕರ್ಣಮ್) ಕತೆಗಳು ಮನಕಲಕುವಂತಿವೆ.

**ಚನ್ನಬಸವ ಪುತ್ತೂರು, ಚಿತ್ರದುರ್ಗ**

- 'ಪ್ರೇಮ ವಿವಾಹ' (ಉಷಾ ನರಸಿಂಹನ್) ಕತೆ ಓದಿ ಬೇಸರ ಮತ್ತು ಆಶ್ಚರ್ಯವಾಯಿತು. ಈ ಶತಮಾನದಲ್ಲಿ ಇಂಥ ಕತೆಯನ್ನು ನಿರೀಕ್ಷಿಸಿರಲಿಲ್ಲ. ಸಮಕಾಲೀನ ಪ್ರಜ್ಞಾವಂತ ಸಮಾಜದಲ್ಲಿ ದ್ವಿಪತ್ನಿತ್ವದ ಕಲ್ಪನೆ ಕೂಡ ಅಕ್ಷಮ್ಯವಾಗಿರುವಾಗ ಅದನ್ನು ವೈಭವೀಕರಿಸುವ ಕತೆ ಬೇಕಿರಲಿಲ್ಲ.

**ಎಂ.ಜಿ. ಶ್ರೀನಾಥ್, ಮೈಸೂರು**

- ಅರುಣಾ ಕೆ.ಆರ್. ಅವರ 'ನಾಮದ ಮಹಿಮೆ' ಪ್ರಬಂಧ ಸ್ವಾರಸ್ಯಕರವಾಗಿದೆ.

**ಪಿ. ಜಯವಂತ ಪೈ, ಕುಂದಾಪುರ**

- 'ಸ್ಮೃತಿಬಿಂಬ' ಅಂಕಣದಲ್ಲಿ ಪ್ರಕಟವಾದ ಚಿತ್ರ ಓದುಗರನ್ನು 1976ರ ಕಾಲಕ್ಕೆ ಕರೆದೊಯ್ದಿದೆ. ಲೇಖಕಿ ತೇಜಸ್ವಿನಿ ನಿರಂಜನ ಅವರ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಖುದ್ದು ಹೋಗಿ ಬಂದ ಅನುಭವವಾಯಿತು.

**ಕೆ.ಎಸ್. ರಾಜಶೇಖರ, ವಿಜಯಪುರ**

- ವಿಮರ್ಶಕಿ ಎಂ.ಎಸ್. ಆಶಾದೇವಿ ಅವರ ಸಂದರ್ಶನ (ಅಕ್ಷತಾ ಹುಂಚದಕಟ್ಟೆ) ಅರ್ಥಪೂರ್ಣ, ಸಕಾಲಿಕ.

**ಮೋಹನ ರು. ಹಣಗಿ, ಅಮೀನಗಡ**




- 'ನಾಂದಿಪದ' (ಒಂದು ಮರ ಹಲವು ಸ್ವರ) ಮಹಿಳಾ ದೃಷ್ಟಿಕೋನದ ಮಹತ್ವವನ್ನು ಸಾರುವಲ್ಲಿ ಯಶಸ್ವಿಯಾಗಿದೆ.

**ರಾಜಶೇಖರ ಕಲ್ಮಠ, ಇಲಕಲ್**

- ಮಹಿಳಾ ವಿಶೇಷ ಮುದ ನೀಡಿತು. ವಿಮರ್ಶಕಿ ಆಶಾದೇವಿ ಅವರ ಸಂದರ್ಶನ ಸಾಹಿತ್ಯದ ವಿಶಿಷ್ಟ ನೋಟಗಳನ್ನು ಕಾಣಿಸಿದೆ. ಸುನಂದಾ ಕಡಮೆ ಅವರ 'ಜೊತೆ ಬೇಡುವೆ ನವಿಲೇ' ಕತೆಯ ಭಾಷೆ ಚೆನ್ನಾಗಿದೆ. ಶಶಿಕಲಾ ಬಾಯಾರು ಅವರ 'ಮರಳಿ ಬಾ ಮನ್ವಂತರವೇ' ಕತೆ ಮನೋಜ್ಞವಾಗಿದೆ.

**ನೀಲಮ್ಮ ಕುಮಾರಪ್ಪ, ಲಿಂಗಸುಗೂರು**

- ಮಧುರಾ ಕರ್ಣಮ್ ಅವರ 'ಕನಸಿನೊಳಗಣ ಮನಸು' ಕತೆ ಚೆನ್ನಾಗಿದೆ. ಆದರೆ 25 ವರ್ಷಗಳ ಹಿಂದೆ ಬೆಂಗಳೂರಿನ ರಾಜಾಜಿನಗರದಲ್ಲಿ ಫೋರ್ಟಿಸ್ ಆಸ್ಪತ್ರೆಯೂ ಇರಲಿಲ್ಲ, ಒರಾಯನ್ ಮಾಲ್ ಸಹ ಇರಲಿಲ್ಲ.

**ಎಚ್.ವಿ. ಶ್ರೀಕಾಂತನ್, ಬೆಂಗಳೂರು**